ಮುಖಾಂತರ ಕಛೇರಿಗೆ ಬರದೇ ಉದ್ದಿಮೆ ಸ್ಥಳದಲ್ಲಿ ಪಡೆಯಬಹುದಾಗಿದೆ.

ಇ) ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976 ರ ಕಲಂ 354 ರಂತೆ ಉದ್ದಿಮೆ ಪರವಾನಗಿ ಪಡೆಯುವುದು ಅವಶ್ಯವಾಗಿರುತ್ತದೆ.

ಬಿ.ಬಿ.ಎಂ.ಪಿ. ಯನ್ನು ವಿಭಜಿಸುವುದು

54(194); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಔಟ್)

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ವಾರ್ಡ್‌ಗಳ ಸಂಖ್ಯೆ ಎಷ್ಟು?

ಆ) ಈ ವಾರ್ಡ್‌ಗಳಲ್ಲಿ ವಾಸಮಾಡುವ ಜನಸಂಖ್ಯೆ ಎಷ್ಟು;

ಇ) ಹೊಸದಾಗಿ ಬೆಂಗಳೂರು ನಗರ ಸುತ್ತಮುತ್ತಲಿನ ಪ್ರದೇಶಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿಸಲು ನಿರ್ಧರಿಸಲಾಗಿದೆಯೇ; (ವಿವರ ನೀಡುವುದು)

ಈ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಆಡಳಿತದ ಹಿತದೃಷ್ಟಿಯಿಂದ ವಿಭಜಿಸಲು ಸರ್ಕಾರದ ಉದ್ದೇಶಿಸಿದೆಯೇ;

ಉ) ಹಾಗಿದ್ದಲ್ಲಿ, ಇದಕ್ಕಾಗಿ ಸಮಿತಿ ರಚಿಸಲಾಗಿದೆಯೇ; (ಈ ಸಮಿತಿಯ ಅಧ್ಯಕ್ಷರು, ಸದಸ್ಯರು ಹಾಗೂ ಕಾರ್ಯ ವ್ಯಾಪ್ತಿಯ ವಿವರ ನೀಡುವುದು);

ಊ) ಈ ಸಮಿತಿಗೆ ಯಾವಾಗ ವರದಿ ನೀಡಲು ಸೂಚಿಸಲಾಗಿದೆ; ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆಗಳ ಮುನ್ನವೇ ಸರ್ಕಾರ ನಿರ್ಧಾರ ಕೈಗೊಳ್ಳುತ್ತದೆಯೇ?

ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) 198.

ಆ) 84,43,675

ಇ) ಇಲ್ಲ.

ಈ) ಹೌದು.

ಉ) ಹೌದು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತ ಹಾಗೂ ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಹಿತದೃಷ್ಟಿಯಿಂದ ಸರ್ಕಾರದ ಆದೇಶ ಸಂಖ್ಯೆ: ನಅಇ 484 ಎಂಎನ್‌ವೈ 2013, ದಿನಾಂಕ: 22–09–2014 ಮತ್ತು ಅಧಿಸೂಚನೆ ಸಂಖ್ಯೆ: ನಅಇ 484 ಎಂಎನ್‌ವೈ 2013 (ಭಾ), ದಿನಾಂಕ: 14–10–2014 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ವಿಭಜನೆ ಮಾಡುವ ಬಗ್ಗೆ ಅಧ್ಯಯನ ನಡೆಸಿ, ವರದಿಯನ್ನು ಸಲ್ಲಿಸಲು ಈ ಕೆಳಕಂಡ ಅಧಿಕಾರಿಗಳನ್ನೊಳಗೊಂಡಂತೆ ತಜ್ಞರ ಸಮಿತಿಯನ್ನು ರಚಿಸಲಾಗಿದೆ.

1.	ಶ್ರೀ. ಬಿ.ಎಸ್. ಪಾಟೀಲ್, ಭಾ.ಆ.ಸೇ., ನಿವೃತ್ತ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಬೆಂಗಳೂರು.	ಅಧ್ಯಕ್ಷರು
2.	ಶ್ರೀ.ಸಿದ್ದಯ್ಯ, ಭಾ.ಆ.ಸೇ., ನಿವೃತ್ತ ಆಯುಕ್ತರು, ಬಿ.ಬಿ.ಎಂ.ಪಿ. ಮತ್ತು ಬಿ.ಡಿ.ಎ. ಬೆಂಗಳೂರು	ಸದಸ್ಯರು
3.	ಶ್ರೀ.ರವಿಚಂದರ್, ಹಿಂದಿನ ಬೆಂಗಳೂರು ಅಜೆಂಡಾ ಟಾಸ್ಕ್ ಫೋರ್ಸ್ ಸದಸ್ಯರು, ಬೆಂಗಳೂರು.	ಸದಸ್ಯರು
4.	ಶ್ರೀ.ಮಣಿವಣ್ಣನ್, ಭಾ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು	ಸದಸ್ಯ ಕಾರ್ಯದರ್ಶಿ

ಊ) ಮೂರು ತಿಂಗಳೊಳಗೆ ವರದಿಯನ್ನು ಸಲ್ಲಿಸಲು ಸಮಿತಿಗೆ ಸೂಚಿಸಲಾಗಿದೆ.

ನೀರಿನ ದರ ಪರಿಷ್ಕರಣೆ

55(1955); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಔಟ್)

ಅ) ಬೆಂಗಳೂರು ಜಲ ಮಂಡಳಿಯು ಕುಡಿಯುವ ನೀರಿನ ದರಗಳನ್ನು ಪರಿಷ್ಕರಿಸಿದೆಯೇ;

ಆ) ಹಾಗಿದ್ದಲ್ಲಿ ಹಿಂದಿನ ದರ, ಪರಿಷ್ಕೃತ ದರಗಳ ವಿವರಗಳೇನು: (ಅಪಾರ್ಟ್‌ಮೆಂಟ್ ಗ್ರಾಹಕರಿಗೆ ನೀಡುವ ನೀರಿನ ದರಗಳ ವಿವರ ನೀಡುವುದು)

ಇ) ಈ ರೀತಿ ನೀರಿನ ದರಗಳನ್ನು ಏರಿಸಲು ಕಾರಣಗಳೇನು: ಹಾಗೂ ಈ ಪರಿಷ್ಕೃತ ದರಗಳಿಂದ ಬರತಕ್ಕ ಹೆಚ್ಚುವರಿ ವರಮಾನವೆಷ್ಟು;

ಈ) ಬೆಂಗಳೂರು ನಗರದಲ್ಲಿ ಪ್ರತಿದಿನ ಸೋರಿಕೆ ಯಾಗುವ ನೀರಿನ ಪ್ರಮಾಣವೆಷ್ಟು;

ಉ) ಇದನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗಿದೆಯೇ:

ಊ) ಹಾಗಿದ್ದಲ್ಲಿ, ಈ ನೀರಿನ ದರಗಳ ಏರಿಕೆಯನ್ನು ರದ್ದುಗೊಳಿಸಲು ಸರ್ಕಾರ ಉದ್ದೇಶಿಸಿದೆಯೇ?

ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಹೌದು.

ಆ) ಅಪಾರ್ಟ್‌ಮೆಂಟ್ ಗ್ರಾಹಕರಿಗೆ ನೀಡುವ ನೀರಿನ ದರಗಳ ವಿವರಗಳು ಈ ಕೆಳಕಂಡಂತಿರುತ್ತದೆ.

1) ಹಿಂದಿನ ದರ : ₹ 19/– ಪ್ರತಿ ಕಿ.ಲೀ.

2) ಪರಿಷ್ಕೃತ ದರ : ₹ 22/– ಪ್ರತಿ ಕಿ.ಲೀ.